## ಹೊಳೆನರಸೀಪುರದ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

## ಸಿ.ಸಿ. ನಂಃ 1032/2021

ಸಾಕ್ಷಿಯ ಹೆಸರು : ನಂದಕುಮಾರ್ ಕೆ.ಪಿ. ಸಿ.ಡಬ್ಲ್ಯೂ- 1

ತಂದೆಯ ಹೆಸರು : ಎನ್.ಪುಟ್ಟಸ್ವಾಮಿ ಪಿ.ಡಬ್ಲ್ಯೂ- 1

ವಯಸ್ಸು : 48 ವರ್ಷ ಪ್ರಮಾಣೀಕರಿಸಿದ ದಿಃ 18/03/2025

ವೃತ್ತಿ : ಚಾಲಕ ಮತ್ತು ನಿರ್ವಾಹಕರು

ವಾಸ : ಕಟ್ಟೆಬೆಳಗುಳಿ ಗ್ರಾಮ

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದ**

ನನಗೆ ಈ ಪ್ರಕರಣದ ಇಬ್ಬರು ಆರೋಪಿಗಳು ಹಾಗೂ ವೀರೇಂದ್ರ ಗೊತ್ತು. ದಿಃ 03.04.2021 ರ ಶನಿವಾರದಂದು ಸಂಜೆ 7 ಗಂಟೆ ಸಮಯದಲ್ಲಿ ನಾನು ಕರ್ತವ್ಯ ಮುಗಿಸಿ ಡೈರಿಯ ಬಳಿ ಇದ್ದಾಗ ನ್ನ ಅಣ್ಣನಾದ ವಿರೂಪಾಕ್ಷ ಅಂದರೆ ಚಾ.ಸಾ 2 ರವರು ಸದರಿ ಡೈರಿಗೆ ಹಾಲನ್ನು ಬಂದಾಗ 1ನೇ ಆರೋಪಿಯಾದ ಕೆ.ಬಿ.ಚಂದ್ರಶೇಖರ್ ಹಾಗೂ ಕೆ.ಬಿ.ವೀರೇಂದ್ರ ಕಮಾರ್ ರವರು ಸದರಿ ಡೈರಿಯ ಬಳಿ ಇದ್ದರು. ನಮ್ಮ ಊರಿನವರು ಸೇರಿ ಮಾಡಿಸಿದ್ದ ಚಟ್ಟವನ್ನು ರಿಪೇರಿಗೆಂದು ಕೊಟ್ಟಿದ್ದು, ಆಗ ಚಾ.ಸಾ 2 ರವರು 1ನೇ ಆರೋಪಿಯನ್ನು ಕುರಿತು ಏಕೆ ಸದರಿ ಚಟ್ಟವನ್ನು ರಿಪೇರಿ ಮಾಡಿಸಿಕೊಂಡು ಬಂದಿಲ್ಲ ಎಂದು ಕೇಳಿದರು. ಆಗ 1ನೇ ಆರೋಪಿ ಚಾ.ಸಾ 2 ರವರಿಗೆ " ನೀನು ಯಾರು ಕೇಳಲು" ಎಂದು ಕೇಳಿ ಅವಾಚ್ಯ ಶಬ್ದಗಳಿಂದ ಬೈದರು ಆಗ ಚಾ.ಸಾ 2 ರವರು ನಾನು ಈ ಊರಿನವರು ಎಂದು ಹೇಳಿದರು. ನಂತರ 2ನೇ ಆರೋಪಿಯು ಸದರಿ ಡೈರಿಯ ಬಳಿ ಹಾಲನ್ನು ಹಾಕಲು ಬಂದಿದ್ದು ಅವರ ಬಳಿ ಇದ್ದ 1ನೇ ಆರೋಪಿ ಚಾ.ಸಾ 2 ರವರ ತಲೆಯ ಹಿಂಭಾಗಕ್ಕೆ ಹಾಗೂ ಬಲಗೈಗೆ ಹೊಡೆದರು. ಕೆ.ಬಿ. ವೀರೇಂದ್ರ ಕುಮಾರ್ ರವರು ಅಲ್ಲೇ ಇದ್ದಂತಹ ಸುಮಾರು 3 ಅಡಿಯ ಉದ್ದದ ಕಾಡು ಜಾತಿಯ ಮರದಿಂದ ಚಾ.ಸಾ 2 ರವರ ಬಲಗೈ ಹಾಗು ಬಲಗಾಲಿಗೆ ಹೊಡೆದಿರುತ್ತಾರೆ. 2ನೇ ಆರೋಪಿ ಚಾ.ಸಾ 2 ರವರ ತಲೆಯ ಕೂದಲನ್ನು ಗುಂಜಾಡಿ ಕೈಯಿಂದ ಹೊಡೆದರು. ಆಗ ನಾನು, ಚಾ.ಸಾ 3 ಮತ್ತು 4 ರವರು ಓಡಿ ಹೋಗಿ ಗಲಾಟೆ ಬಿಡಿಸಿರುತ್ತೇವೆ. ಚಾ.ಸಾ 2 ರವರ ಕಾಲಿಗೆ ಆದ ಗಾಯದಿಂದ ರಕ್ತ ಬರುತ್ತಿತ್ತು. ಅಲ್ಲೇ ಬರುತ್ತಿದ್ದ ಆಟೋದಲ್ಲಿ ಚಾ.ಸಾ 2 ರವರನ್ನು ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು

ನಾನು ಚಿಕಿತ್ಸೆಗಾಗಿ ದಾಖಲಿಸಿರುತ್ತೇನೆ. ಚಾ.ಸಾ 2 ರವರು ಎದೆ ನೋವು ಎಂದು ಹೇಳುತ್ತಿದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತೇವೆ.

2. ನಂತರ ಚಾ.ಸಾ 3 ರವರು ನಾವೇ ಊರಿನಲ್ಲಿ ಪಂಚಾಯಿತಿ ಮಾಡೋಣ ದೂರು ಕೊಡಬೇಡಿ ಎಂದು ಹೇಳಿದರು ಆದರೆ 1ನೇ ಆರೋಪಿಯಾದ ಚಂದ್ರಶೇಖರ್ ಹಾಗೂ ವೀರೇಂದ್ರ ಕುಮಾರ್ ರವರು ತಿರಸ್ಕಾರ ಮಾಡಿದ್ದರಿಂದ ದಿಃ 05.04.2021 ರಂದು ನಾನು ರಾತ್ರಿ 9 ಗಂಟೆ ಸಮಯದಲ್ಲಿ ಹೊಳೆನರಸೀಪುರ ನಗರ ಪೊಲೀಸ್ ಠಾಣೆಗೆ ದೂರನ್ನು ಕೊಟ್ಟಿರುತ್ತೇನೆ. ನಾನು ಸದರಿ ದೂರನ್ನು ಚಂದ್ರಶೇಖರ್, ವೀರೇಂದ್ರ ಕುಮಾರ್ ಹಾಗೂ ವಾಣಿಶ್ರೀ ರವರುಗಳ ಮೇಲೆ ಕೊಟ್ಟಿರುತ್ತೇನೆ. ನಾನು ನೀಡಿದ ದೂರನ್ನು ನೋಡಿದರೇ ಗುರುತಿಸಬಲ್ಲೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ ಮೇರೆಗೆ ನಿ.ಪಿ 1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ 1(ಎ) ಎಂದು ಗುರುತಿಸಲಾಯಿತು. ನಾನು ದೂರನ್ನು ಕೊಟ್ಟ ನಂತರ ಅಂದರೆ ದಿಃ 06.04.2021 ರಂದು ಪೊಲೀಸರು ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ಮಹಜರನ್ನು ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ಚಾ.ಸಾ 5 ಮತ್ತು 6 ರವರು ಕೂಡ ಹಾಜರಿದ್ದರು. ಘಟನೆಯಾದ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿರುತ್ತೇನೆ. ಪೊಲೀಸರು ಸ್ಥಳದಲ್ಲಿ ನಕ್ಷೆಯನ್ನು ಕೂಡ ತಯಾರಿಸಿರುತ್ತಾರೆ. ಹಾಗೂ ಛಾಯಾಚಿತ್ರಗಳನ್ನು ಕೂಡ ತೆಗೆದಿರುತ್ತಾರೆ. ಪೊಲೀಸರು ಸ್ಥಳದಲ್ಲಿ ಒಂದು ಸ್ಟೀಲ್ ಕ್ಯಾನನ್ನು ಹಾಗೂ ಕಾಡು ಜಾತಿಯ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ಗೆ ನಾನು, ಚಾ.ಸಾ 5 ಮತ್ತು 6 ರವರು ಸಹಿ ಮಾಡಿರುತ್ತೇವೆ. ನಾನು ಸದರಿ ಕೃತ್ಯಸ್ಥಳ ಮತ್ತು ಅಮಾನತ್ತು ಮಹಜರನ್ನು ನೋಡಿದರೇ ಗುರುತಿಸಬಲ್ಲೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ ಮೇರೆಗೆ ನಿ.ಪಿ 2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ 2(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಛಾಯಾಚಿತ್ರಗಳನ್ನು ನೋಡಿದರೇ ಗುರುತಿಸಬಲ್ಲೆ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆಯನ್ನು ಕೊಟ್ಟಿಲ್ಲ. ಆ ದಿನ ಚಾ.ಸಾ 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿದ ಆರೋಪಿಗಳು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. 1 ಮತ್ತು 2ನೇ ಆರೋಪಿಗಳು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ವಿನಾಯಿತಿ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅವರನ್ನು ಗುರುತಿಸಲು ಯಾವುದೇ ತಕರಾರು ಇರುವುದಿಲ್ಲ. ನಾನು ಸದರಿ ಹಾಲಿನ ಕ್ಯಾನ್ ಹಾಗೂ ದೊಣ್ಣೆಯನ್ನು

ನೋಡಿದರೇ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಇರುವ ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಕ್ರಮವಾಗಿ ಹಾಲಿನ ಕ್ಯಾನನ್ನು ಮು.ಮಾ 1 ಎಂದು, ದೊಣ್ಣೆಯನ್ನು ಮು.ಮಾ 2 ಎಂದು ಗುರುತಿಸಲಾಯಿತು.

**(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀಸವಾಲು- ಮಾನ್ಯ ಎ.ಪಿ.ಪಿ. ಯವರಿಂದ**

1ನೇ ಆರೋಪಿಯಾದ ಚಂದ್ರಶೇಖರ್ ರವರು ಚಾ.ಸಾ 2 ರವರಿಗೆ ದೊಣ್ಣೆಯಿಂದ ಬಲಗೈಗೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ವೀರೇಂದ್ರಕುಮಾರ್ ಚಾ.ಸಾ 2 ರವರ ಬಲಕೈಗೆ ದೊಣ್ಣೆಯಿಂದ ಹೊಡೆದಿರುವುದು ಎಂದು ನುಡಿಯುತ್ತಾರೆ. ನಾನು ಗಲಾಟೆಯ ವೇಳೆಯಲ್ಲಿ ವೀರೇಂದ್ರ ಕುಮಾರ್ ರವರು ಇರಲಿಲ್ಲ ಹಾಗೂ ಅವರು ನನ್ನ ಅಣ್ಣನಿಗೆ ಹೊಡೆದಿರುವುದಿಲ್ಲ, ಚಂದ್ರಶೇಖರ್ ಹಾಗೂ ವಾಣಿಶ್ರೀರವರು ಮಾತ್ರ ಗಲಾಟೆ ಮಾಡಿ ಹೊಡೆದಿದ್ದು, ವೀರೇಂದ್ರ ಗಲಾಟೆ ಮಾಡಿಲ್ಲ ಹಾಗೂ ಹೊಡೆದಿರುವುದಿಲ್ಲ ಎಂದು ನನಗೆ ಈಗ ಈ ಮೇಲೆ ಓದಿ ಹೇಳಿದಂತೆ ನಾನು ಪೊಲೀಸರಿಗೆ ಮರುಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀಸವಾಲು- ಶ್ರೀ ಎಂ.ಪಿ.ಕೆ.ವಕೀಲರಿಂದ**

ನಾನು ಹಾಗೂ ಇಬ್ಬರು ಆರೋಪಿಗಳು ಹಾಗೂ ವೀರೇಂದ್ರ ಕುಮಾರ್ ರವರು ಸಂಬಂಧಿಕರು ಎಂದರೆ ಸರಿ. ಘಟನೆ 03.04.2021 ರಂದು ಸಂಜೆ 7 ಗಂಟೆ ಸಮಯದಲ್ಲಿ ಆಗಿರುತ್ತದೆ. ಗಲಾಟೆ ಸಂದರ್ಭದಲ್ಲಿ ಚಾ.ಸಾ 2 ರವರಿಗೆ ಬಲಗಾಲಿಗೆ ಆಗಿದ್ದ ಗಾಯದಲ್ಲಿ ರಕ್ತ ಬರುತ್ತಿತ್ತು. ನಾನು ಚಾ.ಸಾ 2 ರವರನ್ನು ಹೊಳೆನರಸೀಪುರದ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ. ಚಾ.ಸಾ 2 ರವರ ಜೊತೆ ಆಸ್ಪತ್ರೆಗೆ ನಾನೊಬ್ಬನೇ ಬಂದಿದ್ದೆನು. ಗಾಯದ ಪ್ರಮಾಣ ಪತ್ರದಲ್ಲಿ ಕೃಷ್ಣೇಗೌಡರವರು ಚಾ.ಸಾ 2 ರವರ ಜೊತೆ ಆಸ್ಪತ್ರೆಗೆ ಬಂದಿದ್ದರು ಎಂದು ನಮೂದಿದೆ ಎಂದರೆ ಸಾಕ್ಷಿಯು ಸದರಿ ಕೃಷ್ಣೇಗೌಡರವರು

ಪ್ರತ್ಯೇಕವಾಗಿ ಆಸ್ಪತ್ರೆಗೆ ಬಂದಿದ್ದರು, ನಾನು ಒಬ್ಬನೇ ಚಾ.ಸಾ 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದು ಎಂದು ನುಡಿಯುತ್ತಾರೆ. ಹೊಳೆನರಸೀಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿ ರಾತ್ರಿ 8.30 ರ ಸಮಯದಲ್ಲಿ ಚಾ.ಸಾ 2 ರವರಿಗೆ ಚಿಕಿತ್ಸೆಯನ್ನು ಕೊಡಲು ಪ್ರಾರಂಭಿಸಿರುತ್ತಾರೆ. ನಾವು ಆಸ್ಪತ್ರೆಗೆ ಆ ದಿನ ರಾತ್ರಿ 8 ರಿಂದ 8.15 ರ ಸಮಯದಲ್ಲಿ ಬಂದಿರುತ್ತೇವೆ. ನಮ್ಮ ಊರಿನಿಂದ ಸದರಿ ಹೊಳೆನರಸೀಪುರದ ಸಾರ್ವಜನಿಕ ಆಸ್ಪತ್ರೆ ಅಂದಾಜು 10 ಕಿ.ಮೀ. ದೂರ ಇರುತ್ತದೆ. ಚಾ.ಸಾ 2 ರವರು ಅವರಿಗೆ ಎದೆನೋವು ಇದೆ ಎಂದು ಹೇಳಿದ್ದರಿಂದ ಮೈಸೂರಿನ ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಚಾ.ಸಾ 2 ರವರಿಗೆ ಆಗಿದೆ ಎನ್ನಲಾದ ಗಾಯಗಳಿಗೆ ಸಂಬಂಧಿಸಿದ ಛಾಯಾಚಿತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು. ಹೊಳೆನರಸೀಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸುಮಾರು 2 ರಿಂದ 2.30 ಗಂಟೆಗಳ ಕಾಲ ನಾವು ಇದ್ದೆವು. ನಾವು ಹೊಳೆನರಸೀಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಹೇಳಿಕೆಯನ್ನು ತೆಗೆದುಕೊಳ್ಳಲು ಬಂದಿದ್ದರು. ಹಾಗಾದರೆ ಎಂ.ಎಲ್.ಸಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಜಯದೇವ ಆಸ್ಪತ್ರೆಯಲ್ಲಿ ಚಾ.ಸಾ 2 ರವರು ಚಿಕಿತ್ಸೆಗಾಗಿ ದಾಖಲಾಗಿರಲಿಲ್ಲ. ಸದರಿ ಮೈಸೂರಿನ ಜಯದೇವ ಆಸ್ಪತ್ರೆಗೆ ಹೋಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ರೀತಿ ಜಯದೇವ ಆಸ್ಪತ್ರೆಗೆ ಹೋಗದೇ ಇರುವುದರಿಂದ ದಾಖಲೆಗಳನ್ನು ಹಾಜರುಪಡಿಸಲು ಆಗುತ್ತಿಲ್ಲ ಆದ್ದರಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಪರಿಚಯ ಇರುವ ವೈದ್ಯಾಧಿಕಾರಿಯಿಂದ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ತಂದು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

2. ಈ ಪ್ರಕರಣದ 2ನೇ ಆರೋಪಿ ಈ ಪ್ರಕರಣ ದಾಖಲಾಗುವ ಮುಂಚೆಯೇ ಚಾ.ಸಾ 2 ರವರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಆ ರೀತಿ 2ನೇ ಆರೋಪಿ ಚಾ.ಸಾ 2 ರವರ ಮೇಲೆ ಪ್ರಕರಣ ದಾಖಲಿಸಿದ್ದರಿಂದ ಚಾ.ಸಾ 2 ರವರು ಭಯಪಟ್ಟು ತಲೆ ಮರೆಸಿಕೊಂಡಿದ್ದರು ಎಂದರೆ ಸರಿಯಲ್ಲ. ಚಾ.ಸಾ 2 ರವರು ದಸ್ತಗಿರಿ ಆಗುತ್ತಾರೆ ಎಂದು ಭಯ ಇದ್ದುದ್ದರಿಂದ ನಾನು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾ.ಸಾ 2 ರವರಿಗೆ ಆಗಿತ್ತು ಎನ್ನಲಾದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದರಿಂದ ಅವರೇ ಬಂದು ದೂರನ್ನು ಕೊಡಲು ಯಾವುದೇ ತೊಂದರೆ ಇರದೇ

ಇದ್ದರೂ ಕೂಡ ಅವರು ತಲೆ ಮರೆಸಿಕೊಂಡಿದ್ದರಿಂದ ನಾನು ಬಂದು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಘಟನೆ ನಡೆದಿದೆ ಎನ್ನಲಾದ ಸಂದರ್ಭದಲ್ಲಿಯೂ ನಾನು ಹಾಸನದಲ್ಲಿ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಘಟನೆ ನಡೆಯಿತು ಎನ್ನಲಾದ ನಾನು ಕರ್ತವ್ಯಕ್ಕೆ ಹಾಜರಾಗಿದ್ದೆನು ಎಂದರೆ ಸರಿ. ಸಾಕ್ಷಿಯ ಮುಂದುವರಿದು ಆ ದಿನ ನನ್ನ ಕರ್ತವ್ಯಾವಧಿ ಬೆಳಿಗ್ಗೆ 6 ರಿಂದ ಸಂಜೆ 3 ಗಂಟೆಯವರೆಗೆ ಇತ್ತು ಎಂದು ನುಡಿಯುತ್ತಾರೆ. ನಮ್ಮ ಡಿಪೋದಲ್ಲಿ ಹಾಜರಾತಿ ಪುಸ್ತಕವನ್ನು ಇಟ್ಟಿರುತ್ತಾರೆ. ಸದರಿ ಹಾಜರಾತಿ ಪುಸ್ತಕದಲ್ಲಿ ನಿಮ್ಮ ಕರ್ತವ್ಯದ ಪಾಳೆಯದ ಬಗ್ಗೆ ನಮೂದು ಇರುತ್ತ ಎಂದರೆ ಸಾಕ್ಷಿಯು ನಮಗೆ  ರೂಟ್ ಪ್ರಕಾರ ಕರ್ತವ್ಯ ನಿರ್ವಹಿಸಬೇಕಾಗುತ್ತದೆ ಎಂದು ನುಡಿಯುತ್ತಾರೆ. ನಾವು ಕರ್ತವ್ಯ ಮುಗಿಸಿ ಬರುವಾಗ ಸದರಿ ಹಾಜರಾತಿ ಪುಸ್ತಕದಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ. ಘಟನೆ ನಡೆಯಿತು ಎನ್ನಲಾದ ಸಮಯದಲ್ಲಿ ನಾನು ಸದರಿ ಸ್ಥಳದಲ್ಲಿ ಇರಲಿಲ್ಲ ಹಾಗೂ ಕರ್ತವ್ಯದಲ್ಲಿ ಇದ್ದೆನು ಆದರೂ ಕೂಡ ಚಾ.ಸಾ 2 ರವರಿಗೆ ಅನುಕೂಲವಾಗಲೆಂದು ಸುಳ್ಳು ಹೇಳುತ್ತಿದ್ದೇನೆ ಎಂದರ ಸರಿಯಲ್ಲ. ನಾನು ಆ ದಿನ  ಕರ್ತವ್ಯ ನಿರ್ವಹಿಸಿರುತ್ತೇನೆ ಎನ್ನುವುದಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

4. ಸದರಿ ಚಟ್ಟವನ್ನು 1ನೇ ಆರೋಪಿ ರಿಪೇರಿ ಮಾಡಿಕೊಂಡು ಬರುವುದಾಗಿ ಹೇಳಿ ತೆಗೆದುಕೊಂಡು ಹೋಗಿದ್ದರು. 1ನೇ ಆರೋಪಿಯೇ ಅದನ್ನು ಏಕೆ ತೆಗೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿಯು ಅವರ ತಾಯಿ ಮರಣ ಹೊಂದಿದ್ದ ಸಮಯದಲ್ಲಿ ಅದನ್ನು ಉಪಯೋಗಿಸಿದ್ದಕ್ಕಾಗಿ ಹಣವನ್ನು ಕೊಟ್ಟಿಲ್ಲ ಎಂದು ಹೇಳಿ ಅವರೇ ಅದನ್ನು ರಿಪೇರಿ ಮಾಡಿಸಿಕೊಡುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಅದನ್ನು ಉಪಯೋಗಿಸಿದ್ದಕ್ಕಾಗಿ ಹಣ ಕೊಡಲೇಬೇಕೆಂಬ ನಿಯಮ ಏನಿಲ್ಲ ಎಂದರೆ ಸರಿ. ಸದರಿ ಗ್ರಾಮಕ್ಕೆ ಎಲ್ಲಾ ಗ್ರಾಮಸ್ಥರು ಉಸ್ತುವಾರಿದಾರರಾಗಿರುತ್ತಾರೆ. ಅದನ್ನು ನಮ್ಮ ಊರಿನಲ್ಲಿ ನಮ್ಮ ಸಮಾಜದವರು ಮಾತ್ರ ಉಪಯೋಗಿಸುತ್ತಾರೆ.  ಸದರಿ ಚಟ್ಟಕ್ಕೂ 1ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಇರುತ್ತದೆ ಅದನ್ನು 1ನೇ ಆರೋಪಿಯೇ ರಿಪೇರಿ ಮಾಡಿಸಲೆಂದು ತೆಗೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. 1ನೇ ಆರೋಪಿಯ ತಾಯಿ ಮರಣ ಹೊಂದಿದ ಸಮಯದಲ್ಲಿ

ಸದರಿ ಚಟ್ಟ ಹಾಳಾಗಿರಲಿಲ್ಲ. ಘಟನೆ ನಡೆಯಿತು ಎನ್ನಲಾದ ಸಮಯದಲ್ಲಿ ಅಲ್ಲಿ ಚಾ.ಸಾ 3 ಮತ್ತು 4 ಹಾಗೂ ನಾನು ಇದ್ದೆನು. ಚಾ.ಸಾ 3 ಮತ್ತು 4 ರವರು ಸಂಬಂಧದಲ್ಲಿ ನನ್ನ ಚಿಕ್ಕಪ್ಪ , ದೊಡ್ಡಪ್ಪನ ಮಕ್ಕಳು.

5. ಘಟನೆ ಮಹಿಳಾ ಹಾಲು ಉತ್ಪಾದಕರ ಸಂಘದ ಬಳಿ ಆಗಿರುತ್ತದೆ. ಸದರಿ ಸಂಘದ ಸದಸ್ಯರು, ಕಾರ್ಯದರ್ಶಿ, ಅಧಕ್ಷರು ಎಲ್ಲಾ ಮಹಿಳೆಯರೇ ಆಗಿರುತ್ತಾರೆ ಎಂದರೆ ಸರಿ. ಆ ದಿನ ಸದರಿ ಡೈರಿಯಲ್ಲಿ ಹಾಲು ಅಳತೆ ಮಾಡುವವರು ಮಾತ್ರ ಒಳಗಡೆ ಇದ್ದರು ಅವರನ್ನು ಹೊರತುಪಡಿಸಿ ಬೇರೆ ಯಾವುದೇ ಮಹಿಳೆಯರು ಇರಲಿಲ್ಲ. ಸದರಿ ಸ್ಥಳದಲ್ಲಿ ಆ ಸಮಯದಲ್ಲಿ 10-15 ಜನ ಮಹಿಳೆಯರಿದ್ದರೂ ಕೂಡ ನಾನು ಉದ್ದೇಶಪೂರ್ವಕವಾಗಿ ಸುಳ್ಳು  ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಚಾ.ಸಾ 2 ಹಾಗೂ ಆರೋಪಿಗಳು ಹೊಡೆದಾಡಿರುವುದನ್ನು ನಾನು ನೋಡಿರುತ್ತೇನೆ. ನಾನಾಗಲೀ, ಚಾ.ಸಾ 2 ರವರಾಗಲೀ ಸದರಿ ಡೈರಿಗೆ ಹಾಲನ್ನು ಹಾಕಲು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತೋಟಕ್ಕೆ ಹೋಗಲೆಂದು ಸದರಿ ಡೈರಿಯ ಬಳಿ ಹೋಗುತ್ತಿದ್ದಾಗ ಚಾ.ಸಾ 3 ಮತ್ತು 4 ರವರು ಅಲ್ಲೇ ನನಗೆ ಸಿಕ್ಕಿದ್ದರು ಎಂದು ನಾನು ಅಲ್ಲೇ ಇದ್ದೆನು. ಮು.ಮಾ 1 ರಲ್ಲಿ 1ನೇ ಆರೋಪಿ ಹೊಡೆದಿರುತ್ತಾರೆ. 1ನೇ ಆರೋಪಿ ಚಾ.ಸಾ 2 ರವರ ತಲೆಯ ಹಿಂಭಾಗಕ್ಕೆ ಹಾಗೂ ಬಲಗೈಗೆ ಹೊಡೆದಿರುತ್ತಾರೆ. ಮು.ಮಾ 1 ರಲ್ಲಿ ಹೊಡೆದಾಗ ಚಾ.ಸಾ 2 ರವರಿಗೆ ಗಾಯ ಆಗಿರಲಿಲ್ಲ, ನೋವಾಗಿತ್ತು. ಆ ದಿನ ವೀರೇಂದ್ರ ಕುಮಾರ್ ರವರು ದೊಣ್ಣೆಯಿಂದ ಹೊಡೆದರು, ವಾಣಿಶ್ರೀಯವರು ತಲೆ ಕೂದಲನ್ನು ಗುಂಜಾಡಿ ಕೈಯಿಂದ ಹೊಡೆದಿರುತ್ತಾರೆ. ನಾನು ಪೊಲೀಸರಿಗೆ ಮರುಹೇಳಿಕೆಯನ್ನು ನೀಡಿ ವೀರೇಂದ್ರ ಕುಮಾರ್ ರವರು ಅಲ್ಲಿ ಇರಲಿಲ್ಲ ಹಾಗೂ ಚಾ.ಸಾ 2 ರವರಿಗೆ ಹೊಡೆದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ 2 ರ ಸಮಯದಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎನ್ನಲಾದ ದೊಣ್ಣೆಗೂ ಮು.ಮಾ 2 ರ ದೊಣ್ಣೆಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

7. ಆ ದಿನ 2ನೇ ಆರೋಪಿ ಸದರಿ ಡೈರಿಗೆ ಹಾಲು ಹಾಕಲು ಬಂದಿದ್ದರು, 1ನೇ ಆರೋಪಿ ಅವರ ತೋಟದಿಂದ ಅದೇ ಮಾರ್ಗವಾಗಿ ಬರುತ್ತಿದ್ದು 2ನೇ ಆರೋಪಿಯನ್ನು ಕರೆದುಕೊಂಡು ಹೋಗಲೆಂದು ಬಂದಿರಬಹುದು. ಆದಿನ ಸದರಿ ಇಬ್ಬರು ಆರೋಪಿಗಳು ಕೂಡ ಒಟ್ಟಿಗೆ ಬಂದಿದ್ದರು. ನನ್ನ, ಚಾ.ಸಾ 2

ಹಾಗೂ ಆರೋಪಿಗಳು ದಾಯಾದಿಗಳಾಗಿರುವುದರಿಂದ ನಮ್ಮೆಲ್ಲರ ಜಮೀನು ಅಕ್ಕಪಕ್ಕ ಇದೆ ಎಂದರೆ ಸರಿ.

8. ಧರಣೇಶ್ ರವರು 1ನೇ ಆರೋಪಿಯ ತೋಟದ ಬಳಿ ತೆಂಗಿನ ಗರಿಗೆ ಬೆಂಕಿ ಹಚ್ಚಿದ್ದ ವಿಚಾರವನ್ನು 1ನೇ ಅರೋಪಿ ಬಂದು ಕೇಳಿದ ವಿಚಾರಕ್ಕೆ ಈ ಗಲಾಟೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಗಲಾಟೆ ನಡೆದಾಗ ಈ ಪ್ರಕರಣದ 1 ಮತ್ತು 2ನೇ ಆರೋಪಿಗಳ ಮೇಲೆ ಹಲ್ಲೆ ಮಾಡಿದ್ದರಿಂದ ಅವರು ಕೂಡ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣದ ವಿಚಾರಣೆ ಇನ್ನೂ ಮುಂದುವರೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 2ನೇ ಆರೋಪಿ ದಾಖಲಿಸಿರುವ ಪ್ರಕರಣವನ್ನು ಮುಚ್ಚಿಹಾಕಲೆಂದು ಈ ಪ್ರಕರಣವನ್ನು ಆರೋಪಿಗಳ ವಿರುದ್ದ ದಾಖಲಿಸಲಾಗಿದೆ ಎಂದರೆ ಸರಿಯಲ್ಲ, ಹಿಂದಿನಿಂದಲೂ ನನಗೂ ಆರೋಪಿಗಳಿಗೂ ಜಮೀನಿನ ವಿಚಾರವಾಗಿ ವ್ಯಾಜ್ಯ ಇತ್ತು ಎಂದರೆ ಸರಿಯಲ್ಲ. ನಾನು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ  ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.